## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

## ಸಿ. ಸಿ. ನಂ. 35/2022

| | | | |
|---|---|---|---|
| ಸಾಕ್ಷಿಧಾರರ ಹೆಸರು | : | ರಾಯಪ್ಪ ಹರಿಜನ | ಪಿಡಬ್ಲ್ಯೂ 2 |
| ತಂದೆ:ಗಂಡನ ಹೆಸರು | : | ರಾಜಪ್ಪ | ಸಿಡಬ್ಲ್ಯೂ 2 |
| ವಯಸ್ಸು | : | 43 ವರ್ಷ | |
| ಉದ್ಯೋಗ | : | ಅಟೋ ಚಾಲಕ | |
| ವಾಸಸ್ಥಳ | : | ಹಾನಗಲ್ | |

ದಿನಾಂಕ 04-01-2023 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಸಾಕ್ಷಿ ನಿ ಪಿ 2 ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 7-8 ತಿಂಗಳ ಹಿಂದೆ ಹಾನಗಲ್ ಪಟ್ಟಣದ ರೇಣುಕಾ ಡಾಬಾದ ಹತ್ತಿರ ಮಾಡಿದ್ದೇನೆ. ಅದರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ. ನಿ ಪಿ 3 ರ ಭಾವಚಿತ್ರದಲ್ಲಿ ನಾನಿದ್ದೇನೆ. ಅದನ್ನು ಯಾವ ಕಾರಣಕ್ಕಾಗಿ ತೆಗೆಯಲಾಗಿದೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಮತ್ತು ನಕ್ಷೆಯನ್ನು ತಯಾರಿಸಿಲ್ಲ. ನಿ ಪಿ 4 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ನಿ ಪಿ 4(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ 30-7-2021 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ಚಾ ಸಾ 1 ರವರು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾ ಸಾ 3 ರವರ ಸಮಕ್ಷಮ ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ನಿ ಪಿ 2 ರ ಮಹಜರು ಮಾಡಿ ನಿ ಪಿ 3 ರ ಭಾವಚಿತ್ರ ತೆಗೆದು ನಿ ಪಿ 4 ರ ಕಚ್ಚಾ ನಕಾಶೆ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ನನಗೆ ನಿ ಪಿ 2

ರಿಂದ **4** ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ಶ್ರೀ. ಜಿ ಆರ್ ಸಿ ವಕೀಲರಿಂದ

**(ಇಲ್ಲ ಎನ್ನುತ್ತಾರೆ )**

: ಮರುವಿಚಾರಣೆ : ಇಲ್ಲ.

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್